# ಮೈಸೂರಿನಲ್ಲಿ ಮುಂಗಾರು ಬೀಜ ಮೇಳ

ಡಿ.ಬಿ.ನಾಗರಾಜ

ವಾತಾವರಣದ ಬದಲಾವಣೆ, ಸತತ ಬರದ ಹೊಡೆತಕ್ಕೆ ಸಿಲುಕಿ ಹೈರಾಣಾಗಿರುವ ರೈತ ಸಮೂಹದ ನೆರವಿಗಾಗಿ 'ಸಹಜ ಸಮೃದ್ಧ' ಕೃಷಿ ಸಂಸ್ಥೆ ಮೈಸೂರಿನಲ್ಲಿ ಜೂನ್ ಮಾಸಾಂತ್ಯದಲ್ಲಿ ಮೂರು ದಿನ ಮುಂಗಾರು ಬೀಜ ಮೇಳ ಆಯೋಜಿಸಿದೆ.

ದೇಶದಲ್ಲಿ ಆರಂಭಗೊಂಡ ಹಸಿರು ಕ್ರಾಂತಿಯ ನಂತರ; ನಮ್ಮ ದೇಸಿ ತಳಿಗಳ ಬೀಜ ಸಂಸ್ಕೃತಿ, ಬೀಜ ಜ್ಞಾನ, ಬೀಜ ಪರಂಪರೆ ಅಪರೂಪವಾಗಿದೆ. ಹೈಬ್ರೀಡ್ ಬೀಜಗಳಿಗೆ ಜೋತು ಬಿದ್ದಿದ್ದ ರೈತ ಸಮುದಾಯ ಇದೀಗ ಬರದ ಹೊಡೆತಕ್ಕೆ ನಲುಗಿದೆ. ಬರವನ್ನು ಎದುರಿಸಿ ಬೆಳೆಯುವ, ಫಸಲು ನೀಡುವ ದೇಸಿ ತಳಿಗಳ ಬೀಜದ ಹುಡುಕಾಟದಲ್ಲಿದೆ.

ರೈತರ ಅನುಕೂಲಕ್ಕಾಗಿ ಸಹಜ ಸಮೃದ್ಧ ಸಂಸ್ಥೆ 2015ರಿಂದಲೂ ಮೈಸೂರು ಭಾಗದಲ್ಲಿ ವಿವಿಧ ಮೇಳ ಆಯೋಜಿಸಿದ್ದು, ಇದೀಗ ಜೂನ್ 28, 29, 30ರಂದು ಮುಂಗಾರು ಬೀಜ ಮೇಳ ನಡೆಸಲು ಸಜ್ಜಾಗಿದೆ.

2015ರಲ್ಲಿ ಸಿರಿಧಾನ್ಯ ಮೇಳ, 2016, 2017, 2018ರಲ್ಲಿ ಮೈಸೂರು ಬೀಜೋತ್ಸವ ನಡೆಸಿದ್ದ 'ಸಹಜ ಸಮೃದ್ಧ' ಸಂಸ್ಥೆ, ಇದೀಗ ಮೂರು ದಿನ ಮುಂಗಾರು ಬೀಜ ಮೇಳ ನಡೆಸಲಿದೆ. ಈಗಾಗಲೇ ರಾಜ್ಯದ ವಿವಿಧ ಭಾಗದ 30 ಬೀಜ ಸಂರಕ್ಷಕರ ಗುಂಪುಗಳು ಮೇಳದಲ್ಲಿ ಭಾಗಿಯಾಗಲು ನೋಂದಣಿ ಮಾಡಿಸಿಕೊಂಡಿದ್ದು, ಈ ಸಂಖ್ಯೆ ಮೇಳ ಆರಂಭದೊತ್ತಿಗೆ ಇನ್ನಷ್ಟು ಹೆಚ್ಚಲಿದೆ.

**400ಕ್ಕೂ ಹೆಚ್ಚು ತಳಿಯ ಬೀಜಗಳ ಪ್ರದರ್ಶನ:** ಹತ್ತು ತರಹದ ಸಿರಿಧಾನ್ಯದ ಬೀಜ, ಮೌಲ್ಯವರ್ಧಿತ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ. 250ಕ್ಕೂ ಹೆಚ್ಚು ಭತ್ತದ ದೇಸಿ ತಳಿಯ ಬೀಜಗಳು, ಇವುಗಳಲ್ಲಿ 25 ತಳಿಯ ಭತ್ತ ಹಾಗೂ ಅಕ್ಕಿಯ ಮಾರಾಟ, ಪ್ರದರ್ಶನ. 150ಕ್ಕೂ ಹೆಚ್ಚು ದೇಸಿ ತರಕಾರಿಯ ಬೀಜಗಳ ಪ್ರದರ್ಶನ, ಗೆಡ್ಡೆ-ಗೆಣಸು... ಹಲಸಿನ ವಿವಿಧ ತಳಿಗಳ ಪ್ರದರ್ಶನ ಮಾರಾಟ ಮೈಸೂರಿನ ಮುಂಗಾರು ಬೀಜ ಮೇಳದಲ್ಲಿ ನಡೆಯಲಿದೆ ಎಂದು ಸಹಜ ಸಮೃದ್ಧ ಸಂಸ್ಥೆಯ ನಿರ್ದೇಶಕ ಕೃಷ್ಣಪ್ರಸಾದ್ ಮಾಹಿತಿ ನೀಡಿದರು.

ಜೂನ್ 28ರ ಶುಕ್ರವಾರ ಕೋಲಾರ ಜಿಲ್ಲೆಯ ಮುಳಬಾಗಲು ತಾಲ್ಲೂಕಿನ ಕುರುಬರಹಳ್ಳಿಯ ರೈತ ಬೀಜ ಮಾತೆ ಡಿ.ಪಾಪಮ್ಮ ಮೇಳಕ್ಕೆ ಚಾಲನೆ ನೀಡಲಿದ್ದಾರೆ. 29ರ ಶನಿವಾರ ಸಾವಯವ ಬೀಜೋತ್ಪಾದನೆ ತರಬೇತಿ ನಡೆಯಲಿದೆ. ಇದಕ್ಕೆ ನೋಂದಣಿ ಕಡ್ಡಾಯ. ಈ ತರಬೇತಿಯಲ್ಲಿ ನರ್ಸರಿ, ಸಸಿ ಬೆಳೆಸುವಿಕೆ, ನಾಟಿ, ಬಿತ್ತನೆ ಸೇರಿದಂತೆ ಇನ್ನಿತರೆ ತಾಂತ್ರಿಕ ಮಾಹಿತಿ ನೀಡಲಾಗುವುದು.

30ರ ಭಾನುವಾರ ಸಂಜೆ 4ಕ್ಕೆ 'ಬೀಜ ವಿನಿಮಯ' ನಡೆಯಲಿದೆ. ಬೀಜ, ಗಿಡ, ಬಳ್ಳಿ, ಕೃಷಿ ಪುಸ್ತಕಗಳನ್ನು ಆಸಕ್ತರು ವಿನಿಮಯ ಮಾಡಿಕೊಳ್ಳಬಹುದು. ಮಾಹಿತಿಗಾಗಿ ಶಿವಪ್ರಸಾದ್–8867252979 ಸಂಪರ್ಕಿಸಬಹುದು.





ಕೈಗಳಲ್ಲಿ ವಿವಿಧ ಬೀಜಗಳು

## ತಮಿಳುನಾಡಿನ ದೇಸಿ ಹತ್ತಿ ತಳಿ..!

ತಮಿಳುನಾಡಿನ ಕರುಂಗನಿ ಪರುತಿ (ಹತ್ತಿ) ದೇಸಿ ಹತ್ತಿ ತಳಿಯ ಬೀಜಗಳ ಪ್ರದರ್ಶನದ ಜತೆ, ಕೈಯಲ್ಲೇ ತಯಾರಿಸಿದ ಹತ್ತಿಯ ಬಟ್ಟೆಗಳನ್ನು ಮಾರಾಟಕ್ಕಿಡಲಿದೆ. ಚೆನ್ನೈನ ತುಲಾ ಸಂಸ್ಥೆ ಸಹ ತನ್ನ ಹತ್ತಿ ತಳಿ, ಬಟ್ಟೆಗಳನ್ನು ಪ್ರದರ್ಶಿಸಲಿದೆ.

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಗೆಡ್ಡೆ-ಗೆಣಸು ಬೆಳೆಗಾರ ಕೇರಳದ ಶಾಜಿ 200 ವಿವಿಧ ಜಾತಿಯ ಗೆಡ್ಡೆ–ಗೆಣಸು ಪ್ರದರ್ಶಿಸಲಿದ್ದಾರೆ. ಮಾನಂದವಾಡಿಯ ಬೆಳೆಗಾರರ ಗುಂಪೊಂದು ಮೇಳದಲ್ಲಿ 15ಕ್ಕೂ ಹೆಚ್ಚು ವಿವಿಧ ಜಾತಿಯ ಬಾಳೆ ಕಂದುಗಳನ್ನು ಪ್ರದರ್ಶಿಸಲಿದೆ ಎಂದು ಕೃಷ್ಣಪ್ರಸಾದ್ ತಿಳಿಸಿದರು.

ಕೃಷಿಕಲಾ 50 ವಿವಿಧ 'ಸೋರೆ' ಪ್ರದರ್ಶಿಸಲಿರುವುದು ವಿಶೇಷ. ಪುತ್ತೂರಿನ ಅನಿಲ್ ಜಾಕ್ ಹಲಸು ಉದ್ಯಮದ ಹಲವು ಚಿತ್ರಣ ಬಿಚ್ಚಿಡಲಿದ್ದು, ಹಣ್ಣಿನ ಪ್ರದರ್ಶನ, ಮಾರಾಟ ನಡೆಸಲಿದ್ದಾರೆ. ಮೇಳಕ್ಕೆ ಬರುವ ರೈತರು ಹಲಸಿನ ಗಿಡ ತಂದರೆ, ಉತ್ತಮ ತಳಿಯ ಹಲಸಿನ ಗಿಡಗಳ ಕಸಿ ಮಾಡಿಕೊಡಲಿದ್ದಾರೆ.

## ಮೇಳದ 'ಬೀಜ' ವೈಶಿಷ್ಟ್ಯ..!

ವಾರ್ಷಿಕ ₹ 50 ಲಕ್ಷ ವಹಿವಾಟು ನಡೆಸುತ್ತಿರುವ ಧಾರವಾಡ ಜಿಲ್ಲೆಯ ಕುಂದಗೋಳದ ಸಂಜೀವಿನಿ ಸಾವಯವ ಕೃಷಿಕರ ಬಳಗ 'ಕೊರಲು' ಸಿರಿಧಾನ್ಯ ಬೀಜ ಪ್ರದರ್ಶಿಸಲಿದೆ. ಭೀಕರ ಬರದಲ್ಲೂ ಬದಲಾದ ವಾತಾವರಣಕ್ಕೆ ಸಿರಿಧಾನ್ಯಗಳನ್ನು ಒಗ್ಗಿಸುವಿಕೆಯಲ್ಲಿ ಈ ಬಳಗ ತಲ್ಲೀನವಾಗಿದೆ.

ಪ್ರಧಾನಿ ಮೋದಿ ತಮ್ಮ ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪಿಸಿದ್ದ ಆನೇಕಲ್‌ನ 'ಅಂಕುರ' ಮಹಿಳಾ ಸಂಘ ಸಾವಯವ ತರಕಾರಿ ಹಾಗೂ ಬೀಜಗಳನ್ನು ಪ್ರದರ್ಶಿಸಲಿದೆ. ಪಿರಿಯಾಪಟ್ಟಣದ ಜೇನುಕುರುಬ ಮಹಿಳೆಯರ ಕಾನನ ಮಹಿಳಾ ಸಂಘ ಗೆಡ್ಡೆ–ಗೆಣಸು, ಮೌಲ್ಯವರ್ಧಿತ ಉತ್ಪನ್ನಗಳನ್ನು ಪ್ರದರ್ಶನಕ್ಕಿಡಲಿದೆ.

ಶಿರಸಿಯ ವನಸ್ತ್ರೀ ಗುಂಪು ತರಕಾರಿ ಬೀಜ, ಮೌಲ್ಯರ್ಧಿತ ಉತ್ಪನ್ನಗಳು, ಕೃಷಿ ಪುಸ್ತಕ, ಪಿರಿಯಾಪಟ್ಟಣದ ಸಹಜ ಕೃಷಿಕರ ಬಳಗ ತರಕಾರಿ ಬೀಜ, ಮಂಡ್ಯದ ಬಯಲುಸೀಮೆ ಬೆಳೆಗಾರರ ಸಂಘ ಭತ್ತ ಮತ್ತು ಅಕ್ಕಿ, ಮೈಸೂರಿನ ಸಹಜ ಸೀಡ್ಸ್ ಬಳಗ 150 ಬಗೆಯ ತರಕಾರಿ, ಸಿರಿಧಾನ್ಯ, ಭತ್ತದ ಬೀಜಗಳನ್ನು ಪ್ರದರ್ಶಿಸಲಿದೆ.

ಶಿವಮೊಗ್ಗದ ನವಿಲೆಯ ಸಾವಯವ ಸಂಶೋಧನಾ ಕೇಂದ್ರ 130 ಭತ್ತದ ತಳಿ ಪ್ರದರ್ಶನದ ಜತೆಯಲ್ಲೇ ವೈಜ್ಞಾನಿಕ ಮಾಹಿತಿ ನೀಡಲಿದೆ. ಮೈಸೂರಿನ ಸಹಜ ಕೃಷಿಕರಾದ ಕೈಲಾಸಮೂರ್ತಿ, ಎ.ಪಿ.ಚಂದ್ರಶೇಖರ್ ತಮ್ಮ ತೋಟದ ವೈವಿಧ್ಯಮಯ ಅನಾವರಣಗೊಳಿಸಲಿದ್ದಾರೆ.

ಹೆಗ್ಗಡದೇವನಕೋಟೆ ತಾಲ್ಲೂಕಿನ ಕಾಡಿನ ಪೀಪಲ್ ಟ್ರೀ ರೈತರ ಗುಂಪು ಕಾಡಿನ ಉತ್ಪನ್ನ ಪ್ರದರ್ಶಿಸಿದರೆ, ಹೊಳೆನರಸೀಪುರದ ವಸುಂಧರೆ ಗುಂಪು ರಾಜಮುಡಿ ಭತ್ತ ಹೊತ್ತು ಬರಲಿದೆ. ಬೆಳವಲ ಫೌಂಡೇಶನ್‌ನ ಸಾವಯವ ತೋಟದ ಅಪರೂಪದ ತರಕಾರಿ–ಹಣ್ಣು ಖರೀದಿಗೆ ಲಭ್ಯವಿರಲಿವೆ. ಪ್ರೊ.ನಂಜುಂಡಸ್ವಾಮಿ ಅವರ ಅಮೃತಭೂಮಿಯ ಬೀಜ ಸಂಗ್ರಹವೂ ಮೇಳದಲ್ಲಿರಲಿದೆ.

# ವಿವಾಹ ಸಂಸ್ಕಾರದಲ್ಲಿ ಕಾಶಿಯಾತ್ರೆ...

ತಾರೋಡಿ ಸುರೇಶ

**ಜ್ಞಾನ ಸಂತಾನವನ್ನು** ಬೆಳೆಸಬಲ್ಲ ವಧು-ವರರೇ ವಿವಾಹಕ್ಕೆ ಯೋಗ್ಯರು ಎಂಬುದನ್ನು ನೋಡಿದೆವು. ವರನು ನಾರಾಯಣ ಸ್ವರೂಪನಾದರೆ ವಧುವು ಲಕ್ಷ್ಮೀ ಸ್ವರೂಪಳು. ವರನು ಮಹೇಶ್ವರನಾದರೆ ಅವಳು ಪಾರ್ವತಿ ಸ್ವರೂಪಳು. ಅವರಿಬ್ಬರೂ ಸೃಷ್ಟಿ ಮೂಲದಲ್ಲಿ ಬೆಳಗುತ್ತಿರುವ ಪ್ರಕೃತಿ ಪುರುಷ ತತ್ವಗಳನ್ನು ಪ್ರತಿನಿಧಿಸುವವರು. ಆರ್ಷ ಸಾಹಿತ್ಯಗಳಲ್ಲಿ ಇದನ್ನು ಅರ್ಥಮಾಡಿಸಬಲ್ಲ ಶ್ವೇತಕೇತು, ಸುವರ್ಚಲಾ ಮುಂತಾದವರ ಕಥೆಗಳನ್ನೂ ನೋಡಬಹುದು. ವಿವಾಹ ಆರಂಭವಾಗುವ ರೀತಿಯೂ ಇದನ್ನೇ ಪ್ರತಿಬಿಂಬಿಸುತ್ತದೆ.

ವಿವಾಹದಲ್ಲಿ ಕಾಶಿ ಯಾತ್ರೆಯ ಪ್ರಕರಣವೊಂದು ಬರುತ್ತದೆ. ಬ್ರಹ್ಮಚಾರಿಯು ಗುರುಕುಲದಲ್ಲಿ ಬ್ರಹ್ಮಚರ್ಯದ ನಿಯಮಗಳನ್ನೆಲ್ಲಾ ಪೂರ್ಣವಾಗಿ ಪಾಲಿಸಿ ಮಾಲೆಯನ್ನು ಧರಿಸಿ, ಉತ್ತರ ದಿಕ್ಕಿನಲ್ಲಿರುವ ಪವಿತ್ರ ಕಾಶಿ ಕ್ಷೇತ್ರದತ್ತ ಪ್ರಯಾಣ ಬೆಳೆಸುತ್ತಾನೆ. ವಯಸ್ಸಿನಲ್ಲಿ ಚಿಕ್ಕವನು. ಆದರೆ, ಜ್ಞಾನದಲ್ಲಿ ಅಧಿಕನು. ಅಂತಹ ಮಹಾಪುರುಷ ಜೈ ಶಂಕರ್ ಎಂದು ಹೋಗುತ್ತಿರುವಾಗ ಕನ್ಯಾ ಪಿತೃಗಳು 'ಜೈ ಶಂಕರ್ ಬದಲು, ಜೈ ಪಾರ್ವತಿ ಶಂಕರ್ ಆಗು' ಎಂದು ಅವನನ್ನು ಪ್ರಾರ್ಥಿಸಿ, ತಮ್ಮ ಮನೆಗೆ ಕರೆದೊಯ್ಯುತ್ತಾರೆ. 'ನಿನ್ನೊಳಗೆ ಬೆಳಗುತ್ತಿರುವ ಜ್ಯೋತಿಯನ್ನು ಹಾಗೆಯೇ ಧರಿಸಿ ಬೆಳೆಸಬಲ್ಲ ಸುಶಿಕ್ಷಿತಳಾದ ಕನ್ಯೆಯೊಬ್ಬಳಿದ್ದಾಳೆ.

ಅವಳನ್ನು ಸ್ವೀಕರಿಸಿ ಧನ್ಯೋ ಗೃಹಸ್ಥಾಶ್ರಮಃ ಎನ್ನುವುದನ್ನು ಸಾರ್ಥಕಪಡಿಸಿ' ಎಂದು ಪೂಜಾದಿಗಳನ್ನು ಮಾಡಿ ಸಾಲಂಕೃತ ಕನ್ಯೆಯನ್ನು ವಿವಾಹ ಮಾಡಿಕೊಡುತ್ತಾರೆ. ಧರ್ಮ ಸಂತಾನವನ್ನು ಪಡೆಯಿರಿ ಎಂದು ಆಶೀರ್ವದಿಸುತ್ತಾರೆ. ಲೋಕದಲ್ಲಿ ಸತ್ಪ್ರಜೆ ಬೇಕು. ಅದಕ್ಕೆ ಜ್ಞಾನಿಯಾದವನು ಪರಮಾತ್ಮನಲ್ಲಿಯೇ ವಿಹರಿಸುವುದರ ಜೊತೆಗೆ ಪ್ರಕೃತಿ ಕ್ಷೇತ್ರದಲ್ಲಿಯೂ ಇಳಿದು ಬಂದು ತನ್ನ ಧರ್ಮವನ್ನು ಬೆಳೆಸಬೇಕು. 'ತಂದೆ ಏನು ತಂದೆ? ಎಂದರೆ ಜ್ಞಾನವನ್ನು ತಂದೆ– ಎಂದು ಹೇಳುವ ಪಿತನಾಗಬೇಕಪ್ಪಾ' ಎಂದು ಶ್ರೀರಂಗ ಮಹಾಗುರುಗಳು ನುಡಿಯುತ್ತಿದ್ದರು. ಈ ತತ್ವವನ್ನು ತಿಳಿಯಪಡಿಸಲು ಕಾಶಿ ಯಾತ್ರೆಯ ಒಂದು ತಾತ್ವಿಕವಾದ ಮತ್ತು ರಸಮಯವಾದ ಸನ್ನಿವೇಶ.

'ಧರ್ಮೇಚ ಅರ್ಥೇಚ ಕಾಮೇಚ ನಾತಿ ಚರಾಮಿ' ಧರ್ಮಾರ್ಥ ಕಾಮಗಳಲ್ಲಿ ಈಕೆಯನ್ನು ಮೀರಿ ನಡೆಯಬಾರದು ಎಂದು ವರನಿಗೂ, ನನ್ನನ್ನು ಸದಾ ಅನುವರ್ತಿಸುವವಳಾಗು, 'ಇಬ್ಬರೂ ಒಂದು ಗೂಡಿ ಈ ಜೀವನ ರಥವನ್ನು ಎಳೆಯೋಣ' ಎಂದು ವಧುವಿಗೂ ನಡೆಯುವ ಸಂವಾದ, ಹಿರಿಯರ ಆದೇಶಗಳು. ಮೋಕ್ಷವೆಂಬ ಮುಖ್ಯಪುರುಷಾರ್ಥ ಸಾಧನೆಗಾಗಿ ತಕ್ಕುದಾದ ಶುದ್ಧ ಮನೋಧರ್ಮವು ಓತಪ್ರೋತವಾಗಿ ವಿವಾಹದಲ್ಲಿ ತುಂಬಿರುತ್ತದೆ.

ಸಾಲಂಕೃತ ಕನ್ಯಾದಾನದ ಸಂದರ್ಭದಲ್ಲಿ ಪ್ರಸನ್ನವಾದ ಮನಸ್ಸಿನಿಂದ ಪುರೋಹಿತರು ಸಭಾಸದರ ಸಮಕ್ಷಮದಲ್ಲಿ 'ಸುಲಗ್ನಾ ಸಾವಧಾನಾಃ ಸುಮಹೂರ್ತಾಃ ಸಾವಧಾನಾಃ' ಎಂದು ಘೋಷಣೆ ಮಾಡುತ್ತಾರೆ. ನಿಮ್ಮ ಇಂದ್ರೀಯ ಮನೋಬುದ್ಧಿಗಳೆಲ್ಲವೂ ಈ ಸುಮುಹೂರ್ತದಲ್ಲಿ ಸಾವಧಾನವಾಗಿದ್ದು, ವಧು–ವರರನ್ನು ಮಂಗಳಮಯವಾದ ಮನಸ್ಸಿನಿಂದ ನೋಡಿರಿ ಎಂದು ಪ್ರಾರ್ಥಿಸುತ್ತಾರೆ. ಆದರೆ, ಇಂದಿನ ದುರ್ದೆಸೆಯನ್ನು ನೋಡಿದಾಗ ಖೇದವಾಗುತ್ತದೆ. ಗಲಾಟೆಗಳು, ಅಸಂಬದ್ಧ ವಿಷಯಗಳನ್ನು ಕುರಿತು ವಾದ–ವಿವಾದಗಳು, ಕೇವಲವಾದ ಲೌಕಿಕ ಭಾವಗಳು ವಿವಾಹದ ಉದ್ದೇಶವನ್ನೇ ವ್ಯರ್ಥಗೊಳಿಸುತ್ತಿವೆ.

ಈ ವಿವಾಹ ಕ್ರಮವನ್ನು ತಂದ ಕಾಲದಲ್ಲಿದ್ದ ಮಂತ್ರಗಳು, ಮಂಗಳ ವಾದ್ಯಗಳು, ದ್ರವ್ಯಗಳು, ದೈವ ಪ್ರೀತಿಗಾಗಿ ನಡೆಸುತ್ತಿದ್ದ ಉಪಚಾರಗಳು- ಇಂದು ವಿಸ್ಮೃತವಾಗಿ ಜೀವಚ್ಛವದಂತಾಗಿರುವುದು ಶೋಚನೀಯವಾಗಿದೆ. ಹಿಂದಿನ ಮತ್ತು ಮುಂದಿನ ಹತ್ತು ತಲೆಮಾರುಗಳು ಉದ್ಧಾರವಾಗಬೇಕೆಂಬ, ಶಾಶ್ವತ ಬ್ರಹ್ಮಲೋಕ ಸಿದ್ಧಿಸಬೇಕೆಂಬ ಸಂಕಲ್ಪವು ಕನ್ಯಾದಾನದ ಹಿಂಬದಿಯಲ್ಲಿರುತ್ತದೆ. ಹೀಗೆ ದಾಟಿಸಬೇಕಾದರೆ ಅಳಿಯನಾದವನು ಎಷ್ಟು ಸಮರ್ಥನಾಗಿರಬೇಕು. ಅಂತಹ ಮಹಾಪುರುಷನನ್ನು ಅಚ್ಯುತ ಎಂದು ಪೂಜಿಸುವುದು ಎಂತಹ ಹೃದಯಂಗಮವಾದ ದೃಶ್ಯವಾಗಿದೆ.

**(ಮುಂದುವರೆಯುತ್ತದೆ)**





# ನಗರದಲ್ಲಿ ಸ್ಕೇಟಿಂಗ್ ಕಲರವ...

ಒಂದನೇ ಪುಟದಿಂದ

ಅವರ ಆಸಕ್ತಿ, ಪರಿಣತಿಯನ್ನು ಗಮನಿಸಿ ಶಿವರಾತ್ರೀಶ್ವರನಗರದ ರಿಂಕ್‌ನಲ್ಲಿ ತರಬೇತಿ ನೀಡಲಾಗುತ್ತದೆ ಎನ್ನುತ್ತಾರೆ ಶ್ರೀಕಾಂತ್.

ಮೈಸೂರಿನಲ್ಲಿ ವಾಹನ ದಟ್ಟಣೆ ಕಡಿಮೆ ಇರುವುದರಿಂದ ತರಬೇತಿ ಹಾಗೂ ಅಭ್ಯಾಸಕ್ಕೆ ಅನುಕೂಲಕರವಾದ ವಾತಾವರಣ ಇದೆ. ಪ್ರತಿ ದಿನ ರಿಂಗ್ ರೋಡ್‌ನಲ್ಲೂ ಅಕಾಡೆಮಿಯ ಸ್ಕೇಟರ್‌ಗಳು ಅಭ್ಯಾಸ ನಡೆಸುತ್ತಾರೆ. ರೋಲರ್ ಸ್ಪೋರ್ಟ್ಸ್ ವಿಭಾಗದಲ್ಲಿ ಅತಿ ಹೆಚ್ಚು ಬೇಡಿಕೆ ಇರುವ ಸ್ಕೇಟಿಂಗ್‌ಗೆ ಮೈಸೂರಿನಲ್ಲೂ ಉತ್ತಮ ಸ್ಪಂದನೆ ಇದೆ ಎನ್ನುವ ಖುಷಿಯೂ ಅಕಾಡೆಮಿಗೆ ಇದೆ.

**"ಇತ್ತೀಚಿನ ದಿನಗಳಲ್ಲಿ ಸ್ಕೇಟಿಂಗ್‌ಗೆ ಹೆಚ್ಚು ಹೆಚ್ಚು ಆಸಕ್ತರು ಬರುತ್ತಿದ್ದಾರೆ. ಈ ಕ್ರೀಡೆಗೆ ಪ್ರೋತ್ಸಾಹವೂ ಉತ್ತಮವಾಗಿದೆ. ಈ ಕಾರಣದಿಂದಲೇ ನಮ್ಮ ಕ್ರೀಡಾ ಅಕಾಡೆಮಿಗೆ 7 ಏಕಲವ್ಯ ಪ್ರಶಸ್ತಿ ಸಿಕ್ಕಿದೆ. ಇದು ಕ್ರೀಡಾ ಕ್ಷೇತ್ರದಲ್ಲಿ ಉತ್ತಮ ಸಾಧನೆಯಾಗಿದೆ. ನಮ್ಮ ಅಕಾಡೆಮಿಯಲ್ಲಿ ತರಬೇತಿ ಪಡೆದವರು ಹಲವು ದಾಖಲೆಗಳನ್ನು ಮಾಡಿದ್ದಾರೆ. ಇದು ನಮಗೆ ಹೆಮ್ಮೆ..."**



**ಶ್ರೀಕಾಂತ್ ರಾವ್** ತರಬೇತುದಾರ

# ಕ್ರಿಕೆಟ್ ಜ್ವರದಲ್ಲೂ ಆರ್ಟಿಕ್ಯುಲೇಟ್ ನೃತ್ಯೋತ್ಸವ..!

ಜಿ.ಪಿ.ಹರೀಶ್

**ಆರ್ಟಿಕ್ಯುಲೇಟ್** ಫೆಸ್ಟಿವೆಲ್ ವತಿಯಿಂದ ಈಚೆಗೆ ಮೈಸೂರಿನ ಗಾನಭಾರತೀ ವೀಣೆ ಶೇಷಣ್ಣ ಭವನದಲ್ಲಿ ಆಯೋಜಿಸಿದ್ದ 37ನೇ ಸಂಚಿಕೆ ಯಶಸ್ವಿಯಾಗಿ ನಡೆಯಿತು. ನೃತ್ಯ ರಸಿಕರಿಂದ ತುಂಬಿ ತುಳುಕುತ್ತಿದ್ದ ಸಭಾಂಗಣದಲ್ಲಿ ನೃತ್ಯದ ಹೊನಲು ಹರಿಯಿತು. ಈ ನೃತ್ಯೋತ್ಸವದ ಸಂಯೋಜಕರಾದ ಮೈಸೂರು ಬಿ.ನಾಗರಾಜ್ ಮತ್ತು ಅವರ ಶಿಷ್ಯರಾದ ಲಕ್ಷ್ಮೀನಾರಾಯಣ ಜೇನಾ, ಅಂದು ವಿಶ್ವಕಪ್ ಕ್ರಿಕೆಟ್‌ನ ಭಾರತ-ಪಾಕಿಸ್ತಾನ ತಂಡದ ನಡುವೆ ಹೈವೋಲ್ಟೇಜ್ ಪಂದ್ಯವಿದ್ದರೂ; ನೃತ್ಯೋತ್ಸವಕ್ಕೆ ಸಕಾಲಕ್ಕೆ ಆಗಮಿಸಿದ್ದ ಕಲಾ ರಸಿಕರನ್ನು ಹೃತ್ಪೂರ್ವಕವಾಗಿ ಬರಮಾಡಿಕೊಂಡರು.

ಈ ಬಾರಿಯ ನೃತ್ಯೋತ್ಸವದಲ್ಲಿ ಭರತನಾಟ್ಯ ಶೈಲಿಯ ನೃತ್ಯ ಕೇಂದ್ರಬಿಂದುವಾಗಿತ್ತು. ನಾಲ್ಕು ಮಂದಿ ಮಹಿಳಾ ಭರತನಾಟ್ಯ ಕಲಾವಿದರು ತಮ್ಮ ಅಮೋಘ ನೃತ್ಯ ಪ್ರದರ್ಶನದಿಂದ ಪ್ರೇಕ್ಷಕರಲ್ಲಿ ಮಿಂಚಿನ ಸಂಚಲನ ಮೂಡಿಸಿದರು.

ಕ್ಷಮಿತಾ ಆರ್.ಶಾಸ್ತ್ರಿ: ಕರ್ನಾಟಕ ಕಲಾಶ್ರೀ ಡಾ.ಸುಪರ್ಣಾ ವೆಂಕಟೇಶ್ ಶಿಷ್ಯೆಯಾದ ಕ್ಷಮಿತಾ ಆರ್.ಶಾಸ್ತ್ರಿ, ಪ್ರಾರಂಭಿಕ ಕಲಾವಿದೆಯಾಗಿ ಶ್ರೀಮದ್ ಪಯೋನಿಧಿ ನಿಕೇತನ ಚಕ್ರಪಾಣಿ ಎಂಬ ಕೃತಿಗೆ ಹೆಜ್ಜೆ ಹಾಕಿದರು. ಇದು ನರಸಿಂಹ ದೇವರನ್ನು ಕುರಿತಾದ ಕೃತಿಯಾಗಿತ್ತು. ರಾಗಮಾಲಿಕೆ ರಾಗ ಹಾಗೂ ಖಂಡ ಚಾಪು ತಾಳದಲ್ಲಿ ಸಂಯೋಜನೆಗೊಂಡಿದ್ದ ಈ ಕೃತಿ ವಿದ್ವಾನ್ ಜಿ.ಗುರುಮೂರ್ತಿಯವರ ರಚನೆಯಾಗಿತ್ತು.

ತಮ್ಮ ಎರಡನೇ ನೃತ್ಯದಲ್ಲಿ ಕ್ಷಮಿತಾ ವಾಗ್ದೇಶ್ವರಿ ರಾಗ ಮತ್ತು ಆದಿತಾಳದಲ್ಲಿ ಸಂಯೋಜನೆಗೊಂಡಿದ್ದ ಕನ್ನಡ ಕೃತಿಗೆ ನೃತ್ಯಾಭಿನಯ ನೀಡಿದರು. ಇದು ಪಾರ್ವತಿಯನ್ನು ಕುರಿತಾದ ಓಂಕಾರ ಬಿಂದು ಮಧ್ಯ ನಿಲಯೇ ಶ್ರೀಚಕ್ರ ರಾಜ ರಾಜೇಶ್ವರಿ ಎಂಬ ಕೃತಿಯಾಗಿತ್ತು. ಕ್ಷಮಿತಾರವರು ತಮ್ಮ ನೃತ್ಯವನ್ನು ಸಂಸ್ಕೃತದಲ್ಲಿ ಮುತ್ತುಸ್ವಾಮಿ ದೀಕ್ಷಿತರು ರಚಿಸಿದ್ದ ಆನಂದ ನಟನ ಪ್ರಕಾಶಮ್ ಚಿತ್ಸಬೇಸಮ್ (ಕೇದಾರ ರಾಗ, ಮಿಶ್ರ ಚಾಪು ತಾಳ) ಎಂಬ ಕೃತಿಯೊಂದಿಗೆ ಸಮಾಪ್ತಿಗೊಳಿಸಿದರು.

ಅರ್ಚನಾ ಎಂ.ಸಿ.: ರಸಿಕ ಪ್ರದರ್ಶಕ ಕಲೆಗಳ ಅಕಾಡೆಮಿ ವಿದ್ಯಾರ್ಥಿನಿಯಾದ ಎಂ.ಸಿ.ಅರ್ಚನಾ ಡಾ.ಬಿ.ಆರ್.ಶೇಷಾದ್ರಿಯವರ ವಿರಚಿತ ಕದ್ಯೋತ್ ರಾಗ ಮತ್ತು ಆದಿತಾಳದಲ್ಲಿ ಸಂಯೋಜಿತಗೊಂಡಿದ್ದ ಪುಷ್ಪಾಂಜಲಿ ಕೃತಿಯ ಮೂಲಕ ತಮ್ಮ ಪ್ರದರ್ಶನ ಆರಂಭಿಸಿದರು. ನಂತರ ರೇವತಿ ರಾಗ ಹಾಗೂ ಗೌಳ ರಾಗದಲ್ಲಿ ಸಂಯೋಜನೆಗೊಂಡಿದ್ದ ಹಾಗೂ ಮೈಸೂರು ವಾಸುದೇವಾಚಾರ್ ವಿರಚಿತ ಪ್ರಣಮಾಮ್ಯಹಂ ಶ್ರೀ ಗೌರಿ ಸುತಮ್ ಎಂಬ ಕೃತಿಗೆ ತಮ್ಮ ಅಮೋಘವಾದ ನೃತ್ಯ ಪ್ರದರ್ಶನ ನೀಡಿ ಪ್ರೇಕ್ಷಕರನ್ನು ಮೂಕವಿಸ್ಮಯಗೊಳಿಸಿದರು. ಶ್ರೀ ಕನಕದಾಸರ ವಿರಚಿತ ಬಾರೋ ಕೃಷ್ಣಯ್ಯ ನಿನ್ನ ಭಕ್ತರ ಮನೆಗೀಗ ಎಂಬ ಕೃತಿಗೆ ನರ್ತಿಸುವ ಮೂಲಕ ತಮ್ಮ ಪ್ರದರ್ಶನ ಸಮಾಪ್ತಿಗೊಳಿಸಿದರು.

ಸುಮಂಗಲಾ ವಿಜಯಕುಮಾರ್ ವರುಣ್: ವಿದುಷಿ ಶ್ರೀಮತಿ ರೇಖಾ ದಿನೇಶ್‌ಕುಮಾರ್ (ಬೆನಕ ನಾಟ್ಯಮಂದಿರ, ಬೆಂಗಳೂರು) ಶಿಷ್ಯೆಯಾದ ಇವರು, ಶ್ರೀ ತಾಳಪಕ್ಕಮ್ ಅಣ್ಣಮ್ಮಾಚಾರ್ಯ ವಿರಚಿತ ಜಯ ಜಾನಕಿ ರಮಣ ಜಯ ವಿಭೀಷಣ ಶರಣ ಎಂಬ ಕೃತಿಗೆ ನರ್ತಿಸಿದರು. ನಂತರ, ವೇಣು ಗಾನನೇ ಕೋರಿ ಎನ್ನನಮ್ ಎಂಬ ಕೃತಿಗೆ ನೃತ್ಯಾಭಿನಯ ನೀಡಿದರು. ನಂತರ ಶ್ರೀ ಪುರಂದರದಾಸರ ದೇವರನಾಮ ಕಡಗೋಲ ತಾರಣ್ಣ ಚಿನ್ನವೇ ಎಂಬ ಕೃತಿ ಮೂಲಕ ತಮ್ಮ ನೃತ್ಯ ಸಮಾಪ್ತಿಗೊಳಿಸಿದರು.

**ಮೇಖಲ ಭಾರದ್ವಾಜ್:** ಶ್ರೀಮತಿ ಬಿ.ಭಾನುಮತಿ ಮತ್ತು ಶೀಲಾ ಚಂದ್ರಶೇಖರ್ ಶಿಷ್ಯೆಯಾದ ಇವರು, ದಾರುವರ್ಣದ ಮೂಲಕ ತಮ್ಮ ನೃತ್ಯ ಆರಂಭಿಸಿದರು. ಕಮಾಚ್ ರಾಗ ಆದಿತಾಳದಲ್ಲಿದ್ದ ಮಾತೇ ಮಲಯ ಧ್ವಜ ಪಾಂಡ್ಯ ಸಂಜಾತೆ ಎಂಬ ಕೃತಿಯು ಮುತ್ತಯ್ಯ ಭಾಗವತರ್‌ರವರ ಕೃತಿಯಾಗಿತ್ತು. ಕೊನೆಯಲ್ಲಿ ರಾಗಮಾಲಿಕೆ ರಾಗ ಮತ್ತು ಆದಿತಾಳದಲ್ಲಿ ಸಂಯೋಜನೆಗೊಂಡಿದ್ದ ಶ್ರೀ ಸುಬ್ರಹ್ಮಣ್ಯ ಭಾರತೀಯರ್‌ರವರ ಕಣ್ಣಮ್ಮ ಕೃತಿಗೆ ಅಭಿನಯಿಸುವುದರ ಮೂಲಕ ತಮ್ಮ ಪ್ರದರ್ಶನವನ್ನು ಸಮಾಪ್ತಿಗೊಳಿಸಿದರು.

ಈ ಎಲ್ಲ ನೃತ್ಯ ಪ್ರದರ್ಶನಗಳು ಅಮೋಘವಾಗಿ ಮೂಡಿ ಬಂದು, ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ವಿಶ್ವಕಪ್ ಕ್ರಿಕೆಟ್ ಜ್ವರವಿದ್ದರೂ ಆರ್ಟಿಕ್ಯುಲೇಟ್ ನೃತ್ಯೋತ್ಸವಕ್ಕೆ ಪ್ರೇಕ್ಷಕರ ಬರವಿರಲಿಲ್ಲ.

ನಾದ ಲೋಕ



ಕಣ್ಮನ ಸೆಳೆದ ನೃತ್ಯ

## ಕುಂದು ಕೊರತೆ

### ತ್ಯಾಜ್ಯ ದನದ ಹೊಟ್ಟೆಗೆ..!



ಸ್ವಚ್ಛ ಮೈಸೂರಿನ ಗರಿಗೆ ಮುಕ್ಕಾಗುವಂತೆ ನಗರದ ಒಳಭಾಗದ ವಿವಿಧ ಬಡಾವಣೆಗಳಲ್ಲಿ ಅಲ್ಲಲ್ಲೇ ತ್ಯಾಜ್ಯದ ರಾಶಿ ನಿತ್ಯವೂ ಗೋಚರಿಸುತ್ತಿದೆ. ಕಸ ವಿಲೇವಾರಿ ಸಮರ್ಪಕವಾಗಿ ನಡೆಯದಾಗಿದೆ.

ಕಸದ ರಾಶಿಯೊಳಗೆ ದನಗಳು ಆಹಾರ ಅರಸುವುದು ನಡೆದಿದ್ದು, ಪ್ಲಾಸ್ಟಿಕ್ ತ್ಯಾಜ್ಯವೂ ಜಾನುವಾರು ಹೊಟ್ಟೆ ಸೇರುತ್ತಿದ್ದು, ಆರೋಗ್ಯಕ್ಕೆ ಮಾರಕವಾಗಿದೆ. ಇನ್ನೊಂದೆಡೆ ಪರಿಸರವೂ ಕಲುಷಿತಗೊಳ್ಳುತ್ತಿದೆ.

**ಎಂ.ಎನ್.ಜೋಯಿಸ್ ರಸ್ತೆ ನಿವಾಸಿಗಳು,**



### ಅಸಹ್ಯಕರ ವಾತಾವರಣ ತಪ್ಪಿಸಿ

ಡಿ.ಬನುಮಯ್ಯ ರಸ್ತೆ ಬದಿಯ ಖಾಲಿ ನಿವೇಶನದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಸುರಿದಿರುವುದರಿಂದ ಅಸಹ್ಯಕರ ವಾತಾವರಣ ನಿರ್ಮಾಣವಾಗಿದೆ.

ಅಲ್ಲದೇ, ಸ್ಥಳದಲ್ಲೇ ಸಾರ್ವಜನಿಕರು ಮೂತ್ರ ವಿಸರ್ಜಿಸುವುದು ಮುಂದುವರೆಯುತ್ತಿದೆ. ಇದರಿಂದ ದುರ್ನಾತ ಬೀರುತ್ತಿದ್ದು, ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.



### ರೋಗ ಹರಡದಂತೆ ಎಚ್ಚರವಹಿಸಿ

ಕೆ.ಆರ್.ಮೊಹಲ್ಲಾದ ವೀಣೇಶ್ವರ ರಸ್ತೆ ಬದಿಯ ಫುಟ್‌ಪಾತ್ ಮೇಲೆ ಸ್ಥಳೀಯರು ಸುರಿದಿರುವ ಕಸದ ರಾಶಿಯಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯುಂಟಾಗುತ್ತಿದೆ.

ಕಸದ ಮೇಲೆ ಮಳೆ ನೀರು ಬಿದ್ದು, ಆಹಾರ ಕೊಳೆತು ದಿನೇ–ದಿನೇ ಸೊಳ್ಳೆಗಳು ಹೆಚ್ಚುತ್ತಿವೆ. ಜನರು ಸಾಂಕ್ರಾಮಿಕ ರೋಗ ಹರಡುವ ಭೀತಿಯಲ್ಲಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಶೀಘ್ರದಲ್ಲೇ ತ್ಯಾಜ್ಯ ವಿಲೇವಾರಿ ಮಾಡಿಸಬೇಕು ಹಾಗೂ ತ್ಯಾಜ್ಯ ಸಂಗ್ರಹಣೆಗೆ ಕಸದ ಡಬ್ಬಗಳನ್ನು ಇಡಬೇಕು.

**ಪ್ರಶಾಂತ್ ಹಟ್ಟಿ,** ವಿದ್ಯಾರ್ಥಿ



### ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ

ಮೈಸೂರಿನ ಮಹಾತ್ಮಗಾಂಧಿ ರಸ್ತೆಯ ಜೆಎಸ್‌ಎಸ್ ಆಸ್ಪತ್ರೆ ಮುಂಭಾಗ ಮಹಾನಗರ ಪಾಲಿಕೆ ಅಳವಡಿಸಿರುವ ಮುನ್ನೆಚ್ಚರಿಕೆ ಸೂಚನಾ ಫಲಕದ ಮುಂಭಾಗದಲ್ಲೇ ಸ್ಥಳೀಯರು ಕಸ ಸುರಿದಿರುವುದು ಕಸ ಬಿದ್ದಿರುವ ಸಮೀಪದಲ್ಲೇ ವ್ಯವಸ್ಥೆಗೆ ಅಣಕವಾಡಿದಂತಿದೆ.

ಪ್ಲಾಸ್ಟಿಕ್ ತ್ಯಾಜ್ಯದೊಂದಿಗೆ ಚರಂಡಿ ಹೂಳನ್ನು ಆಸ್ಪತ್ರೆ ಮುಂದೆ ಸುರಿದಿದ್ದು, ಸಾಂಕ್ರಾಮಿಕ ರೋಗಕ್ಕೆ ಆಹ್ವಾನ ನೀಡಿದಂತಿದೆ. ಸಂಬಂಧಪಟ್ಟ ಅಧಿಕಾರಿಗಳು ತ್ಯಾಜ್ಯ ವಿಲೇವಾರಿ ಮಾಡಿಸಿ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು.

**ಅಖಿಲ್ ಅಹಮದ್,** ವಿದ್ಯಾರ್ಥಿ

## ಮುನ್ನೋಟ

### ಜೂನ್ 26, ಬುಧವಾರ

**ಕೃತಿಗಳ ಲೋಕಾರ್ಪಣೆ**




ಮೈಸೂರಿನ ಸಂವಹನ ಪ್ರಕಾಶನದ ವತಿಯಿಂದ ಜೂನ್ 26ರಂದು ಪತ್ರಕರ್ತ ರವಿ ಪಾಂಡವಪುರ ಅವರ ರಚನೆಯ 'ರೈಟ್–ರೈಟ್' ಹಾಗೂ 'ಅಯ್ಯೋ ದ್ಯಾವ್ರೇ' ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸಂಜೆ 4.30ಕ್ಕೆ ಮಾನಸಗಂಗೋತ್ರಿ ಆವರಣದಲ್ಲಿರುವ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ನಗರದ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಅಧ್ಯಕ್ಷ ಪ್ರೊ.ಭಾಷ್ಯಂ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶಾಸಕ ಅಡಗೂರು ಎಚ್.ವಿಶ್ವನಾಥ್ ಕೃತಿ ಬಿಡುಗಡೆ ಮಾಡಲಿದ್ದು, ನಿವೃತ್ತ ಪ್ರಾಂಶುಪಾಲ ಪ್ರೊ. ಎಂ.ಕೃಷ್ಣೇಗೌಡ ಕೃತಿ ಕುರಿತು ಮಾತನಾಡುವರು. ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಅಧ್ಯಕ್ಷತೆ ವಹಿಸುವರು.

### ಜೂನ್ 28, ಶುಕ್ರವಾರ

**'ಮೂಕಜ್ಜಿಗೆ ಐವತ್ತು' ಕೃತಿ ಬಿಡುಗಡೆ**

ಮೈಸೂರಿನ ತನು-ಮನು ಪ್ರಕಾಶನ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ವತಿಯಿಂದ ಜೂನ್ 28ರಂದು ಡಾ.ಕೆ.ಶಿವರಾಮ ಕಾರಂತ ಅವರ 'ಮೂಕಜ್ಜಿಗೆ ಐವತ್ತು' ಕೃತಿ ಬಿಡುಗಡೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಅಂದು ಸಂಜೆ 5ಗಂಟೆಗೆ ಕಲಾಮಂದಿರ ಆವರಣದ ಮನೆಯಂಗಳ ವಿಭಾಗದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಪತ್ರಕರ್ತ ಕೆ.ಬಿ.ಗಣಪತಿ ಕೃತಿ ಬಿಡುಗಡೆ ಮಾಡುವರು.

ಕೃತಿ ಕುರಿತು ಕೆಎಸ್‌ಒಯು ಕನ್ನಡ ವಿಭಾಗದ ಅಧ್ಯಕ್ಷರಾದ ಡಾ.ಕವಿತಾ ರೈ ಕೃತಿ ಕುರಿತು ಮಾತನಾಡುವರು. ಚಿಂತಕ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅಧ್ಯಕ್ಷತೆ ವಹಿಸುವರು.



### 30ಗಳ ಕಾರ್ಯಕ್ರಮ

ನಗರದ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ ತಿಂಗಳ ಕಾರ್ಯ್ರಕಮದ ಅಂಗವಾಗಿ ಜೂನ್ 25ರಿಂದ ವಿವಿಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜೂನ್ 25ರಂದು ಶ್ರೀರಾಂಪುರದಲ್ಲಿರುವ ಲಕ್ಷ್ಮಿನರಸಿಂಹ ದೇವಸ್ಥಾನ ಆವರಣದಲ್ಲಿ, ವಿದ್ವಾನ್ ಮೈಸೂರು ರಾಜಲಕ್ಷ್ಮಿ ಅವರಿಂದ ವೀಣಾ ವಾದನ ನಡೆಯಲಿದ್ದು, ಇವರಿಗೆ ವಿದ್ವಾನ್ ಕಾಂಚನ ಈಶ್ವರ ಭಟ್ (ಮೃದಂಗ), ಎಂ.ಆರ್.ಮಂಜುನಾಥ್ (ಘಟಂ) ವಾದ್ಯ ಸಹಕಾರ ನೀಡುವರು.

ಜೂನ್ 26ರಂದು ಕುವೆಂಪುನಗರದ ಗಾನಭಾರತೀ ಸಭಾಂಗಣದಲ್ಲಿ ವಿದ್ವಾನ್ ಎಂ.ನಿಶಾಂತ್ ಅವರು ಗಾಯನ ಪ್ರಸ್ತುತಪಡಿಸಲಿದ್ದು, ಇವರಿಗೆ ಕೆ.ಜೆ.ದಿಲೀಪ್ ಪಿಟೀಲಿನಲ್ಲಿ, ಸುನಾದ್ ಆನೂರು ಕಂಜಿರ ವಾದ್ಯದಲ್ಲಿ ಸಾತ್ ನೀಡಲಿದ್ದಾರೆ.

### ನೀವೂ ಕಳುಹಿಸಿ

'ಮೆಟ್ರೊ' ಕುಂದುಕೊರತೆ, ಕ್ಯಾಂಪಸ್ ಕಲರವ, ಲೇಖನ ಕಳುಹಿಸಲು...

ಇ ಮೇಲ್: mysoremetro@prajavani.co.in

ವಾಟ್ಸ್‌ಆ್ಯಪ್; 95133 22937

